ಕಾಣೆಮೀನಿನ ಪಳದಿ ಸುಳಿದುಹೋಯಿತು. ಇಬ್ಬರೂ ಬಾಯಿ ಚಪ್ಪರಿಸುತ್ತ ತಮ್ಮ ತಮ್ಮ ಜೇಬುಗಳಿಗೆ ಕೈಹಾಕಿ ಒಂದೊಂದು ಬಾಟಲುಗಳನ್ನು ಹೊರತೆಗೆದವರು ಇನ್ನೂ ಏನೇನೋ ಮಾತಾಡಿದರು. ಅವು ಏನೇನಿರಬಹುದೆಂದು ನಿಮಗೆ ಮನವರಿಕೆಯಾಗುವ ಹಾಗೆ ನೀವೇ ಕಲ್ಪಿಸಿಕೊಳ್ಳುವುದೊಳ್ಳೆಯದು.

ಸರಿ, ನಾವೀಗ ಸ್ವಲ್ಪ ಹೊತ್ತು ಕಾಯಬೇಕು; ಅವರ ಬಾಟಲುಗಳು ಖಾಲಿಯಾಗುವವರೆಗೂ ಕಾಯಬೇಕು. ಮೊದಲು ಅವರು ಆ ಬಾಟಲುಗಳನ್ನು ಅದಲುಬದಲು ಮಾಡಿಕೊಂಡರೆಂದು ಹೇಳುವುದು ಸೂಕ್ತ. ಆಮೇಲೆ ಅಂಗೈಗಳನ್ನು ಜೋರಾಗಿ ಉಜ್ಜಿಕೊಂಡರು, ಚಪ್ಪಾಳೆ ತಟ್ಟಿದರು, ಮೈ ಬೆಚ್ಚಗೆ ಮಾಡಿಕೊಂಡರು, ಇನ್ನೂ ಇನ್ನೂ ಕೆರಳುತ್ತಿದ್ದ ಸಮುದ್ರವನ್ನು ಮೌನವಾಗಿ ದಿಟ್ಟಿಸಿದರು. ಸ್ವಲ್ಪ ಹೊತ್ತಿನ ನಂತರ ಖಾಲಿ ಬಾಟಲುಗಳನ್ನು ಸಮುದ್ರಕ್ಕೆಸೆದರು, ಯಾರೋ ಯಾವ ಕಾಲದಲ್ಲೋ ಒಟ್ಟಿಗೆ ಹಾಡುತ್ತಿದ್ದ ಹಾಡುಗಳನ್ನು ನೆನಪು ಮಾಡಿಕೊಂಡು ಜೋರಾಗಿ ಹಾಡಿದರು, ಕೈಕೈ ಹಿಡಿದುಕೊಂಡು ತೀರದ ಕಡಿದಾದ ಬಂಡೆಗಳ ಮೇಲೆ ನಡೆಯುತ್ತಾ ಊರಿನತ್ತ ಹೆಜ್ಜೆಹಾಕಿದರು. ಆಗ ಅವರೇನು ಅಮಲಿನಲ್ಲಿದ್ದರೋ ಅಥವಾ ಅವರಿಗೆ ಸಮುದ್ರದ ಜೊತೆ ಸೆಣಸಿ ನಡೆಯಲಾಗದಷ್ಟು ಸುಸ್ತಾಗಿತ್ತೋ ಗೊತ್ತಿಲ್ಲ. ಆದರೆ, ಊರಿನ ಚೌಕದವರೆಗೂ ಕೈಕೈ ಹಿಡಿದುಕೊಂಡು, ಮೈಗೆ ಮೈ ತಾಗಿಸಿಕೊಂಡು ಹೋದರೆಂದು ಗೊತ್ತು. ಆ ಚೌಕದಲ್ಲಿ ಇದ್ದಕ್ಕಿದ್ದಂತೆ ಒಬ್ಬರನ್ನೊಬ್ಬರು ಆಶ್ಚರ್ಯದಿಂದ ನೋಡಿದರು. ಆಗವರ ಮೇಲೇರಿದ ಹುಬ್ಬುಗಳು ಕೆಳಗಿಳಿಯಲಿಲ್ಲವಂತೆ, ಹಲ್ಲುಗಳು ಕಟಕಟವೆಂದುವಂತೆ, ಕಣ್ಣುಗಳು ಕಿಡಿಕಾರಿದವಂತೆ, ತುಟಿಗಳು ಬಿಗಿದುಕೊಂಡವಂತೆ, ಸ್ನಾಯುಗಳು ಹುರಿಗೊಂಡವಂತೆ, ದನಿಯಲ್ಲಿ ಹುಲಿಯ ಘರ್ಜನೆ ಕೇಳಿಸಿತಂತೆ. ಮರುಕ್ಷಣ ಮೂಡಣ ಅಪ್ಪಣ್ಣ 'ಹಂದಿ' ಎಂದು ಭುಸುಗುಟ್ಟಿದ; ಪಡುವಣ ಅಪ್ಪಣ್ಣ 'ಕಿರುಬ ನನಮಗನೇ' ಎಂದು ಅಬ್ಬರಿಸಿದ. ಕೂಡಲೇ ಒಬ್ಬನಿಗೆ ತೆಂಕಣದ ಕಡೆ, ಇನ್ನೊಬ್ಬನಿಗೆ ಪಡುವಣದ ಕಡೆ ಹೋಗಿಬಿಡುವುದೇ ಸೂಕ್ತವೆಂದು ತೋರಿತು.

ಅಂದಿನಿಂದ ಆ ಎರಡೂ ಕುಟುಂಬಗಳ ನಡುವೆ ಅಭೇದ್ಯವೂ ಗಹನವೂ ಅರ್ಥಗರ್ಭಿತವೂ ಅಷ್ಟೇ ದುರಂತಮಯವೂ ಆದ ಇನ್ನೊಂದು ಮೌನ ನೆಲೆಸಿಬಿಟ್ಟಿದೆ. ಅವರನ್ನು ಮತ್ತೊಮ್ಮೆ ಇನ್ನೂರು ವರ್ಷಗಳ ದ್ವೇಷವೊಂದು ಬಂಧಿಸಿಟ್ಟಿದೆ. ಕಾರಣಗಳನ್ನು ಹುಡುಕುವುದರಲ್ಲಿ ಅಂಥ ಆಸಕ್ತಿಯೇನೂ ಇಲ್ಲದ ಊರವರಿಗೆ ಅವರು ಹಾಗಿರುವುದೇ ರೂಢಿಯಾಗಿಹೋಗಿದೆ. ಇದುವರೆಗೂ ಈ ಕತೆಯನ್ನು ಓದಿದ ನಿಮಗೂ ಅಷ್ಟೇ ಅಲ್ಲವೆ?


## ಎಸ್‌. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ಕನ್ನಡದ ವಿಶಿಷ್ಟ ಲೇಖಕ. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲ ಬಲ್ಲವರಿಲ್ಲ ಈ ಊರಿನಲ್ಲಿ', 'ಆಯ್ದ ಕತೆಗಳು' (ಕಥಾಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ', 'ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ', 'ವಿಧಾನಸಭೆಯಲ್ಲೊಂದು ಹಕ್ಕಿ' (ಕವನ ಸಂಕಲನಗಳು), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ', 'ಸರ್ವ ಜನಾಂಗದ ಶಾಂತಿಯ ಭಾಷೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿ ಸಣ್ಣಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು). ದಿವಾಕರ್, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.